## ಅನನ್ಯ ಕನ್ನಡತಿ

ಕಲರ್ಸ್ ಕನ್ನಡದ 'ಕನ್ನಡತಿ' ಚೆನ್ನಾಗಿ ಮೂಡಿಬರುತ್ತಿದೆ. 650ಕ್ಕೂ ಹೆಚ್ಚು ಕಂತು ಮುಗಿಸಿದರೂ ಉತ್ತಮ ರೀತಿಯಲ್ಲಿ ವೀಕ್ಷಕರನ್ನು ರಂಜಿಸುತ್ತಿದೆ. ಕಲಾವಿದರೂ ಪಾತ್ರಕ್ಕೆ ಜೀವ ತುಂಬಿದ್ದಾರೆ. ಮೊದಲಿಗೆ ಧಾರಾವಾಹಿಯಲ್ಲಿನ 'ಕನ್ನಡಾಭಿಮಾನ' ಕೇವಲ ವೀಕ್ಷಕರನ್ನು ಸೆಳೆಯುವ ತಂತ್ರ ಎಂದು ಭಾವಿಸಿದ್ದೆ. ಅದನ್ನು ಇಂದಿಗೂ ಉಳಿಸಿಕೊಂಡಿರುವುದು ಮೆಚ್ಚುವಂತಹದ್ದು. ನಾಯಕಿ ಭುವಿ ತೋರಿಸುವ ಸಂಯಮ, ಸರಳತೆ, ಪರಿಸ್ಥಿತಿಯನ್ನು ನಿಭಾಯಿಸುವ ಬುದ್ಧಿವಂತಿಕೆ, ಸ್ಥಿತಪ್ರಜ್ಞೆ ಯುವಜನರಿಗೆ ಮಾದರಿಯಂತಿವೆ. ಪ್ರತಿ ಕಂತಿನ ಕೊನೆಯಲ್ಲಿ ಪ್ರಸಾರವಾಗುವ 'ಸರಿಗನ್ನಡಂ ಗೆಲ್ಗೆ' ಕನ್ನಡದ ಬಗ್ಗೆ ನಮಗೆ ತಿಳಿಯದ ವಿಷಯದ ಪರಿಚಯ ಮಾಡಿಕೊಡುತ್ತದೆ. ಧಾರಾವಾಹಿ ಸೊಗಸಾಗಿ ಮೂಡಿಬರಲು ಕಾರಣರಾದ ತಂತ್ರಜ್ಞರಿಗೂ ಕಲಾವಿದರಿಗೂ ಅಭಿನಂದನೆಗಳು.

—ಶಾಲಿನಿ ಮನೋಹರ್, ಬೆಂಗಳೂರು

## ರೋಗದ ಸರಣಿ

ಕಲರ್ಸ್ ಕನ್ನಡದ 'ಕನ್ನಡತಿ'ಯಲ್ಲಿ ಅಮ್ಮಮ್ಮನಿಗೆ ರೋಗದ ಮೇಲೊಂದು ರೋಗ ಬಾಧಿಸುತ್ತಿರುವುದು ವಿಚಿತ್ರವಾಗಿದೆ. ಅಮೆರಿಕಕ್ಕೆ ಹೋಗಿ ಕ್ಯಾನ್ಸರ್ ಸಮಸ್ಯೆಗೆ ಚಿಕಿತ್ಸೆ ಮುಗಿಸಿ ಬರುತ್ತಿರುವಂತೆ ಅವರಿಗೆ ಈಗ ಮರೆವಿನ ರೋಗ ಪೀಡಿಸುತ್ತಿದೆ. ಈ ಧಾರಾವಾಹಿ ಮುಗಿಯುವ ಹೊತ್ತಿಗೆ ಅವರಿಗೆ ಇನ್ನೇನು ರೋಗಗಳು ಬರುತ್ತವೆಯೊ? ಕಥೆಯನ್ನು ಎಳೆಯುವ ಮತ್ತು ಅದಕ್ಕೆ ವಿಚಿತ್ರ ತಿರುವು ನೀಡುವ ಕಥೆಗಾರರ ಜಾಣ್ಮೆಗೆ ಏನನ್ನಬೇಕು?

—ರಮಾನಂದ ಶರ್ಮಾ, ನವದೆಹಲಿ

## ಇಷ್ಟವಾದ ಸಂವೇದನೆ

ಝೀ ಕನ್ನಡದ 'ಸತ್ಯ' ಧಾರಾವಾಹಿ ಇತ್ತೀಚೆಗೆ ಸ್ವಲ್ಪ ವೇಗವನ್ನು ಪಡೆದುಕೊಳ್ಳುತ್ತಿದೆ. ಇದರ ಸನ್ನಿವೇಶವೊಂದು ಇಷ್ಟವಾಯಿತು. ನಾಯಕಿ ಸತ್ಯ 'ತಿಂಗಳ ರಜೆ'ಯ ಸಮಸ್ಯೆಯಿಂದ ಹೊಟ್ಟೆನೋವನ್ನು ಅನುಭವಿಸುತ್ತಿರುತ್ತಾಳೆ. ಇದನ್ನು ಮನಗಂಡ ನಾಯಕ ಕಾರ್ತಿಕ್ ಸ್ಯಾನಿಟರಿ ನ್ಯಾಪ್ಕಿನ್ ಬಾಕ್ಸ್ ಅನ್ನು ಖರೀದಿಸಿ ತಂದುಕೊಡುತ್ತಾನೆ. ವೈದ್ಯರಲ್ಲಿಗೆ ಕರೆದುಕೊಂಡು ಹೋಗುತ್ತೇನೆ ಎಂದು ಕಾಳಜಿ ತೋರಿಸುವ ಈ ದೃಶ್ಯ ಅರ್ಥಪೂರ್ಣ ಎನಿಸಿತು. ಹೆಣ್ಣಿನ ದೈಹಿಕ ಸಮಸ್ಯೆಯ ನೋವಿನ ಸಂದರ್ಭದಲ್ಲಿ ಗಂಡಸರೂ ಸ್ವಲ್ಪ ಕಾಳಜಿ ತೋರಿಸಬೇಕಾಗುತ್ತದೆ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ಗುಬ್ಬಿ ಮೇಲೆ ಬ್ರಹ್ಮಾಸ್ತ್ರ

ವಾರದ ಪತ್ರ

ಸಿರಿ ಕನ್ನಡದ 'ಯುಗಾಂತರ'ದಲ್ಲಿ ಕೃಷಿ ಭೂಮಿಯಲ್ಲಿ ನಿವೇಶನ ಮಾಡುತ್ತಾರೆ. ಈ ಪ್ರಕ್ರಿಯೆಯಲ್ಲಿ 1.1 ಕುಂಟೆಯ ತುಂಡು ಭೂಮಿಗೆ ಪಹಣಿ ಕೊಡಲು ಬರುವುದಿಲ್ಲ. 11ಬಿ ಖಾತೆ ಮಾಡಿಸಿ ಮಾರುಕಟ್ಟೆ ಬೆಲೆಯ ಅರ್ಧಕ್ಕೆ ಮಾರಾಟ ಮಾಡುವ ವ್ಯವಹಾರ ನಗರ ಪ್ರದೇಶದ ಸುತ್ತಮುತ್ತ ನಡೆದಿದೆ. ಇಂತಹ ತುಂಡು ಭೂಮಿಯಲ್ಲಿ ವ್ಯವಸಾಯವೂ ಇಲ್ಲ, ಮನೆ ಕಟ್ಟಲು ಸ್ಥಳೀಯ ಸಂಸ್ಥೆಗಳಿಂದ ಅನುಮತಿಯೂ ಸಿಗುವುದಿಲ್ಲ. ಕಾನೂನಿನ ಸಂಕೀರ್ಣ ಅಂಶವನ್ನು ಪರಿಣಾಮಕಾರಿಯಾಗಿ ವೀಕ್ಷಕರಿಗೆ ಮನದಟ್ಟು ಮಾಡಿಸುವಲ್ಲಿ ಸೇತುರಾಮ್ ಯಶಸ್ವಿಯಾಗಿದ್ದಾರೆ. ಆದರೆ, ತುಂಡು ಭೂಮಿಗೆ 11ಬಿ ಖಾತೆ ನೀಡಿದ ಅಧಿಕಾರಿಯನ್ನು ಮತ್ತು ಅವುಗಳ ನೋಂದಣಿ ಮಾಡುವ ಅಧಿಕಾರಿಯನ್ನು ಶಿಕ್ಷೆಗೆ ಒಳಪಡಿಸದೇ ಕೇವಲ ಜಮೀನಿನ ಮಾಲೀಕ ಮತ್ತು ಜಿ.ಪಿ.ಎ. ಮಾಡಿಸಿಕೊಂಡವರನ್ನು ಶಿಕ್ಷೆಗೆ ಗುರಿಪಡಿಸುವುದು 'ಗುಬ್ಬಿ ಮೇಲೆ ಬ್ರಹ್ಮಾಸ್ತ್ರ' ಪ್ರಯೋಗಿಸಿದಂತೆ ಇದೆ. ಹೊಲ ಗದ್ದೆಗಳಲ್ಲಿ ಮನೆಗಳು ಆಗುತ್ತಿವೆ. ಮುಂದೊಂದು ದಿನ ಜಲಾವೃತವಾದರೆ ಯಾರು ಹೊಣೆ? 'ಹಗ್ಗದ ಆಸೆ ಮುಗ್ಗಿನ ಜೋಳ' ಎಂಬಂತೆ ಕಡಿಮೆ ಬೆಲೆಗೆ ನಿವೇಶನ ಎಂದು ಮುಗಿಬೀಳುವವರನ್ನು ದುರುಪಯೋಗ ಮಾಡಿಕೊಳ್ಳುವವರನ್ನು ನಿಯಂತ್ರಿಸುವವರು ಯಾರು?

—ಮಲ್ಲಿಕಾರ್ಜುನ ಸುರಧೇನುಪುರ

## ಯಥಾ ರಾಜಾ ತಥಾ ಪ್ರಜಾ

ಕಲರ್ಸ್ ಕನ್ನಡದ 'ರಾಮಾಚಾರಿ' ಸಾಫ್ಟ್‌ವೇರ್ ಆಲಸಿಗಳ ಗೂಡಾಗಿದೆ. ಕಂಪನಿಯ ಪ್ರಾಜೆಕ್ಟ್‌ಗಳ ಬಗ್ಗೆ ಚರ್ಚೆ ಆಗುವುದರ ಬದಲು ಉದ್ಯೋಗಿಗಳ ವೈಯಕ್ತಿಕ ಜೀವನದ ಬಗ್ಗೆ ಆಸಕ್ತಿ ಹೆಚ್ಚಿಸಿಕೊಂಡಿದೆ. ಪ್ರೀತಿಸುವವರಿಗೆ ಮದುವೆ ಮಾಡಿಸುತ್ತಿದೆ. ರಾಮಾಚಾರಿ, ಚಾರು ಮಧ್ಯೆ ಪ್ರೀತಿ ಹುಟ್ಟಿಸಲು ಯೋಜನೆ ಹಾಕಿಕೊಂಡಿದೆ. ಇಂತಹ ಕಂಪನಿಯೂ ಇರಬಹುದೇ?

ಪ್ರತಿಷ್ಠಿತ ಕಂಪನಿ ಮ್ಯಾನೇಜರ್‌ಗೆ ಇರಬೇಕಾದ ಘನತೆ ಬಬ್ಲಿ ಸರ್ ಉಳಿಸಿಕೊಂಡಿಲ್ಲ. ಚಿತ್ರದುರ್ಗವನ್ನು ಪ್ರವೇಶಿಸಿರುವ ಅವರ ವೇಷ ಭೂಷಣ ಚೆನ್ನಾಗಿಲ್ಲ. ಬಣ್ಣ ಬಣ್ಣದ ಬಟ್ಟೆ ತೊಟ್ಟು, ತಿರುಕರಂತೆ ತಿರುಗುತ್ತಿರುವ ಅವರು ನಿಜವಾಗಲೂ ಕಂಪನಿಯ ಮ್ಯಾನೇಜರ್ ಹೇಗೆ ಆಗುತ್ತಾರೆ?

—ಪುಷ್ಪಾ ಎನ್.ಕೆ. ರಾವ್

## ಸಿನಿಮಾ ವಾಹಿನಿಗಳ ಕಥೆ ವ್ಯಥೆ

ಇತ್ತೀಚೆಗೆ ಸಿನಿಮಾ ವಾಹಿನಿಗಳು ತಮ್ಮ ಮೂಲ ಉದ್ದೇಶವನ್ನೇ ಮರೆತಂತೆ ಕಾಣಿಸುತ್ತದೆ. ಈಗ ಪ್ರಸಾರ ಆಗುತ್ತಿರುವ ಸಿನಿಮಾಗಳು ವಾರಕ್ಕೆ ಕನಿಷ್ಠ ಪಕ್ಷ ಎರಡು–ಮೂರು ಬಾರಿ ಮರು ಪ್ರಸಾರ ಆಗುತ್ತವೆ. ಅಪರೂಪಕ್ಕೆ ಹೊಸ ಸಿನಿಮಾ ಬರುತ್ತವೆ. ತೀವ್ರ ನಿರಾಶೆ ಮೂಡಿಸಿದ್ದಕ್ಕೊಂದು ಉದಾಹರಣೆ ಹೇಳುವುದಾದರೆ, ಉದಯ ಮೂವೀಸ್‌ನಲ್ಲಿ ರಾಜ್‌ಕುಮಾರ್ ಅಭಿನಯದ 'ಚಲಿಸುವ ಮೋಡಗಳು' ಸಿನಿಮಾ ಕೇವಲ ಒಂದು ಗಂಟೆ ಮೂವತ್ತೈದು ನಿಮಿಷದಲ್ಲಿ ಮುಗಿಸಿದರು.

ರಾಜ್ ಮತ್ತು ಸರಿತಾ ನೃತ್ಯದ ಒಂದು ಹಾಡಿನ ಸಮೇತ ಸುಮಾರು ಇಪ್ಪತ್ತೈದು ನಿಮಿಷದ ದೃಶ್ಯಕ್ಕೆ ಕತ್ತರಿ ಪ್ರಯೋಗ ಮಾಡಿದ್ದರು. ಕಥೆಯ ಜೀವಾಳದಂತಹ ಸಂದರ್ಭಕ್ಕೆ ಕತ್ತರಿ ಹಾಕಿ ಪ್ರಸಾರ ಮಾಡಿದರೆ ಸಿನಿಮಾ ಸ್ವಾರಸ್ಯ ಹೊರಟು ಹೋಗುತ್ತದೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ದಾನವೇ ಧರ್ಮ

ಭಕ್ತಿ ವಾಹಿನಿಯಲ್ಲಿ ಪ್ರಸ್ತುತಗೊಳ್ಳುತ್ತಿರುವ ಸೋಮನಾಥ ಜ್ಯೋತಿರ್ಲಿಂಗ ಕ್ಷೇತ್ರ ಧಾರ್ಮಿಕ ಮಾತ್ರವಲ್ಲದೆ ಸಮಾಜಮುಖಿಯೂ ಆಗಿದೆ. ಅಲ್ಲಿ ಅನೇಕ ಅನಾಥರಿಗೆ ಆಶ್ರಯ ನೀಡಿರುವುದು ಶ್ಲಾಘನೀಯ. ದಾನಿಗಳು ಅನಾಥ ಬಂಧುಗಳಿಗೆ ದಾನ ನೀಡುವಾಗಲೂ ಪುನೀತಭಾವದಿಂದ ನಮಸ್ಕರಿಸುತ್ತಾರೆ. ಇದು ಸೀಮಾತೀತವಾದ ಸುಸಂಸ್ಕೃತಿಯ ಒಂದು ಭಾಗ.

—ಪೂರ್ಣಿಮಾ ಮೂರ್ತಿ, ಬೆಂಗಳೂರು

## ನೆನಪಾದರು ಪುಟ್ಟಣ್ಣ

ಚಿತ್ರದುರ್ಗದ ಕಲ್ಲಿನ ಕೋಟೆಯಲ್ಲಿ ಕಲರ್ಸ್ ಕನ್ನಡದ 'ರಾಮಾಚಾರಿ' ಚಿತ್ರೀಕರಣ ಮಾಡಿದ್ದು ಕಥೆಯ ಘನತೆಯನ್ನು ಹೆಚ್ಚಿಸಿದೆ. ಧಾರಾವಾಹಿ ನೋಡಿದಾಗೆಲ್ಲ ಪುಟ್ಟಣ್ಣ ಕಣಗಾಲರು ನೆನಪಿಗೆ ಬರುತ್ತಾರೆ. ಈಚೆಗೆ ಶಂಕರ್ ಅಶ್ವತ್ಥರ ಪಾತ್ರ ಕಾಣೆಯಾಗಿದೆ. ಕೆಟ್ಟ ಯೋಜನೆಯಿಂದ ಆಗುವ ಅನಾಹುತಗಳ ಚಿತ್ರಣ ಚೆನ್ನಾಗಿದೆ.

—ಕಮಲಾದೇವಿ ರಾಜಶೇಖರ ಹಳ್ಳೂರ್, ಬೆಂಗಳೂರು

## ಗುಣಮಟ್ಟಕ್ಕೆ ಖಾತ್ರಿ ಬೇಕು

ಪ್ರಸಾರವಾಗುವ ಅನೇಕ ಧಾರಾವಾಹಿಗಳ ನಡುವೆ ಜಾಹೀರಾತುಗಳು ನುಗ್ಗಿ ರಸಾಭಾಸ ಮಾಡುತ್ತವೆ. ವಿಚಿತ್ರವೆಂದರೆ ಜಾಹೀರಾತಿನಲ್ಲಿ ಬರುವ ಉತ್ಪನ್ನಗಳನ್ನು, ಅವುಗಳನ್ನು ಪ್ರೋತ್ಸಾಹಿಸುವ ಮಂದಿ ಬಳಸುತ್ತಾರೆ ಅಥವಾ ಬಳಸುವುದಿಲ್ಲ ಎಂಬುದರ ಬಗ್ಗೆ ವೀಕ್ಷಿಸುವ ಮಂದಿಗೆ ಖಾತ್ರಿಯಿಲ್ಲ. ಜೊತೆಗೆ ಉತ್ಪನ್ನಗಳ ಗುಣಮಟ್ಟದ ಬಗ್ಗೆ ಖಾತ್ರಿಯೇನು? ಮೇಲಾಗಿ ಅವುಗಳಿಗೆ ಸೆನ್ಸಾರ್ ನಿಯಂತ್ರಣವೂ ಇಲ್ಲ. ಜಾಹೀರಾತುಗಳಲ್ಲಿನ ಚಿತ್ರಣಕ್ಕೆ ಕಡಿವಾಣ ಬೇಡವೇ?

—ಕೆ. ಹೊನ್ನಪ್ಪ, ಕ್ಯಾತ್ಸಂದ್ರ